Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 226] ಮಂಗಳವಾರ 24—8—48 [ಬಿಡಿ ಪ್ರತಿ 3 ಪೈ

ವಾರ್ತೆಗಳು

ವಿಶ್ವಸಂಸ್ಥೆ ಮುಂದೆ ಹೈದರಾಬಾದಿನ ಪ್ರಶ್ನೆ ಬಂದರೆ ಬ್ರಿಟ್ ಅದನ್ನು ವಿರೋಧಿಸಿ 'ವೀಟೋ' ಚಲಾಯಿಸಲು ಸಿದ್ಧವಿದೆಯೆಂದು ಹೇಳಲಾಗಿದೆ.

ಕಾಶ್ಮೀರದ ಲಡಖ್ ಕಣಿವೆಯಲ್ಲಿರುವ ಗಣಸ್ಕರ್ ಪದಂ ಎಂಬ ಹೆಸರಿನ ಬೌದ್ಧ ಗುಡುವನ್ನು ಪಾಕೀಸ್ತಾನ ಧಾಳಿಗಾರರು ಗುಂಡು ಹಾಕಿ ಕೊಂದಿದ್ದಾರೆ.

ವಿಶ್ವಸಂಸ್ಥೆ ಕಾಶ್ಮೀರ ವಿಚಾರಣ ಸಮಿತಿ ಸಭೆ ಮೊನ್ನೆ 3 ಗಂಟೆ ಕಾಲ ಜರುಗಿತೆಂದು ನವದೆಹಲಿ ವರದಿ.

ಭಾಲ್ಕ್ಯಾದ ಪ್ರಸಿದ್ಧ ವರ್ತಕ ಕಾಶಪ್ಪ ಬಂದರೆಯವರ 30 ಸಾವಿರ ರೂ. ಬೆಲೆ ಬಾಳುವ 75 ಎತ್ತುಗಳನ್ನು 13 ಸಾವಿರ ರೂ ಗೆ ತನ್ನ ಕಡೆಯವರಿಗೆ ನಿಜಾಂ ತಹಸೀಲದಾರನು ಹರಾಜು ಮೂಡಿಸಿರುವನು

ಇದೇ ತಾ || 28 ರಲ್ಲಿ ನಡೆಯಬೇಕಿದ್ದ ಮೈಸೂರು ಪೌರಸಭೆಯ ಸಾಧಾರಣ ಸಭೆ 31 ನೇ ತಾ || 5 ಗಂಟೆಗೆ ಜರಗುವುದು.

ರಾಜಾಜಿಯವರು ಮೊನ್ನೆ ದಿನ ತ್ರಿವೇಂದ್ರಂನಲ್ಲಿ ಮಹಾತ್ಮ ಗಾಂಧಿ ಕಾಲೇಜಿನ ಪ್ರಾರಂಭೋತ್ಸವ ನಡೆಸಿದರು.

ಸಂಯುಕ್ತ ರಾಷ್ಟ್ರ ಸಂಸ್ಥೆಯ ವಿಶ್ವ ಫೆಡರೇಶನ್ನಿನ ಅಧ್ಯಕ್ಷ ಸ್ಥಾನಕ್ಕೆ ಸೆಪ್ಟಂಬರ್‌ನಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಜಿನೀವಾದಲ್ಲಿ ಸೂಚಿಸಲಾಗುವುದೆಂದು ಗೊತ್ತಾಗಿದೆ.

ಹೈದರಾಬಾದಿನ 250 ಹಳ್ಳಿಗಳು ಸ್ವತಂತ್ರವೆಂದು ಸಾರಿವೆ.

ವುಡ್‌ಲ್ಯಾಂಡ್ಸ್

ಜನನಿಬಿಡ 2 ನೇ ವಾರ

V - 2

ನಾವು ಇಬ್ಬರು

ಪಾತ್ರ— ಟಿ. ಆರ್. ಮಹಾಲಿಂಗಂ
ಏಂ. ಜಯಲಕ್ಷ್ಮಿ, ಬೇಬಿ ಕಮಲ

(ಪ್ರತಿದಿನ 3 ಪ್ರದರ್ಶನಗಳು)

—ಜಯಮಂ ಏರಿಯಾಸ್

ಹೈದರಾಬಾದಿನ ಸಂಪಾದಕರಿಗೆ ಕೊಲೆಯ ಬೆದರಿಕೆ

ಸಿಟಿ ಕೋ-ಅಪರೆಟಿವ್ ಬೇಂಕಿನ ಡೈರೆಕ್ಟರುಗಳ ಚುನಾವಣೆ

ಮೈಸೂರು ರಾಜ್ಯ ಭಾರ ಕೋಮುವಾರು ಹಾಲಾಹಲದಿಂದ ದೂರವಿರಬೇಕೆಂಬುದೇ ನನ್ನ ಮಹದೇಚ್ಛೆ ಎಂದು ರಾಜಾಜಿ ಮೈಸೂರು ಮಂತ್ರಿಗಳಿಗೆ ತಿಳಿಸಿದ್ದಾರೆ.

ಮೈಸೂರು, ಆ 24 — ಶ್ರೀಗಳಾದ ರಾಜಸೇವಾಸಕ್ತ ಸಿ. ನರಸಿಂಹಯ್ಯ, ಬಿ.ಎ. ನಂಜುಂಡಯ್ಯ, ಟಿ. ಗುಂಡಪ್ಪ, ಧರ್ಮರತ್ನಾಕರ ಕೆ. ನಂದೀಬಸಪ್ಪ, ಡಿ. ಬಿ. ಕೃಷ್ಣಪ್ಪ, ಜಿ. ಜನಾರ್ಧನನಾಯ್ಡು ಡಾ || ಎ. ವಿ ರಂಗರಾವ್, ಅಸ್ಥಾನ ವಿದ್ವಾನ್ ಎಕ್.. ಶ್ರೀಕಂಠಶಾಸ್ತ್ರಿ, ಡಾ || ಬಿ. ಎಸ್. ಸೂರ್ಯನಾರಾಯಣ ರಾವ್, ಹೆಚ್. ರಾಮಣ್ಣ, ಡಬ್ಲ್ಯು. ಹೆಚ್. ಥಿಯೋಟಸ್ ಕಂಠಯ್ಯ, ಟಿ ಚಿದಂಬರಂ ಈಶ್ವರಪ್ಪ ಅಲಿಯಾಸ್ ಚೌಡಯ್ಯ, ಬಿ ಶ್ರೀನಿವಾಸಯ್ಯಂಗಾರ್ ರವರುಗಳು ಸಿಟಿ ಕೋಅಪರೆಟಿವ್ ಬೇಂಕಿನ ಡೈರೆಕ್ಟರುಗಳಾಗಿ ಮೊನ್ನೆ ನಡೆದ ಚುನಾವಣೆಯಲ್ಲಿ ಚುನಾಯಿತರಾಗಿರುತ್ತಾರೆ.

ವರ್ತಮಾನ ಸಂಗ್ರಹ

ಕಳೆದ ವಂಗಳ ವಾರ ರಜಕಾರರು ಬೀಂಕರ್ ಗಡಿಯಲ್ಲಿ ನಡೆಸಿದ ಧಾಳಿಯಿಂದ 9 ವಕ್ಕಳು ಕೊಲೆ ಮಾಡಲ್ಪಟ್ಟವು, ಲಕ್ಷಾಂತರ ರೂ ಬೆಲೆ ಬಾಳುವ ವಸ್ತುಗಳು ಲೂಟಿಯಾದವು, ಅನೇಕ ಮನೆಗಳು ಭಸ್ಮವಾದುವು, ಅನೇಕ ಸ್ತ್ರೀಯರ ಮಾನಭಂಗವಾಯಿತೆಂದು ಗೊತ್ತಾಗಿದೆ.

ಅರಬ್ ಪ್ರಚಾರ ಸಮಿತಿ ವಾರ್ತಾ ರೀತ್ಯ ಸಿರಿಯಾ ವಿಶ್ವಸಂಸ್ಥೆಯಲ್ಲಿ ಹೈದರಾಬಾದ್ ಬಗ್ಗೆ ಪ್ರಶ್ನೆಯೆತ್ತುವುದಿಲ್ಲ.

ಹೈದರಾಬಾದ್ ರಜಕಾರರು ಬೀರಾರ್-ಹೈದರಾಬಾದ್ ಗಡಿ ಬಳಿ ಭೀಕರ ಧಾಳಿ ಮಾಡುತ್ತಿದ್ದಾರೆ.

ನಾಗಪುರ, ಆ 22 — ಪ್ರೊ | ಭಾರತಕ್ಕೆ ಕೆಂಬ ಮನವಿಗೆ ರುಜು ಹಾಕಿದ ನವಾಬ್ ವಕ್ ಸೂಫ್ ಜಾಗ್ ಮತ್ತು ಅಕ್ತರ್ ಅಲಿರವರುಗಳ ದಸ್ತಗಿರಿಯಾಗಿದೆ. ಮನವಿಗೆ ರುಜು ಹಾಕಿದ ಪೆನ್ಷನ್‌ದಾರರ ಪೆನ್ಷನ್ ನಿಲ್ಲಿಸಲಾಗಿದೆ. ಇತ್ತೆಹಾದಿನ ವಿರೋಧ ಪ್ರಚಾರ ಮಾಡಿದಕ್ಕೆ 'ಇಮ್ಯಾಜ್' ಸಂಪಾದಕರಿಗಾದ ಗತಿಯೊಗುವುದೆಂದು ಪತ್ರಿಕಾ ಸಂಪಾದಕರುಗಳನ್ನು ಬೆದರಿಸಲಾಗಿದೆ.

ಗಾಂಧೀಜಿ ಕೊಲೆ ಮೊಕದ್ದಮೆಯಲ್ಲಿ ಮುಂಬಯಿ ಗೃಹ ಸಚಿವ ಮುರಾರ್ಜಿ ದೇಸಾಯಿ ಸಾಕ್ಷ್ಯ ವೀಯುವುದನ್ನು ಶ್ರೀ ಭೂಪಟ್ಕರರು ವಿರೋಧಿಸಿರುವರು

ಮೊಳಕಾಲ್ಮೂರು ತಾಲ್ಲೂಕು ಬರ ಕಾರಿ ಫಾರಿಸ್ಟುಗಳಲ್ಲಿ ಬೇಡವಾಬ್ದಾರಿ ಅಧಿಕಾರಿಗಳು ನ್ಯಾಯಬಾಹಿರವಾಗಿ ಇಜ್ಜಲು ಸುಡುತ್ತಿರುವರಂತೆ.

ಇಂಗ್ಲೆಂಡಿನ ನಿಜಾಂ ಏಜೆಂಟರು ರಾಜಿಗೆ ಗುಪ್ತ ಭೇಟಿ ಇತ್ತಿದ್ದರು.

ರಾಜಾಜಿಯೊಡನೆ ಹಲವು ನಿಮಿಷಗಳು

ರಾಜಾಜಿ ಮಹಾರಾಜಾಸ್ ಕಾಲೇಜ್ ಪ್ರಿನ್ಸಿಪಾಲರಿಗೊಂದು ಭಾರಿ ಡೋಸ್ ಕೊಡಬೇಕಾಯಿತು.

ಮಹಾರಾಜಾಸ್ ಕಾಲೇಜಿನಲ್ಲಿ ನಡೆದ ರಾಜಾಜಿ ಭಾಷಣ ತಮ್ಮ ಮನೆಯೆತಳಗಿನ ಪಾಸಗೀ ಸಮಾರಂಭ ಎಂದು ಭಾವಿಸಿದರೋ ಏನೊ, ಪತ್ರಿಕೆ ರೆಪ್ರೋಗಿಗಳಿಗೆ ಕೂರಲು ಸ್ಥಳವಿಲ್ಲ, ನಿಲ್ಲಲು ಜಾಗವಿಲ್ಲ. ನೆಮಗಿಲ್ಲಿ ಪ್ರವೇಶವಿಲ್ಲ ಎಂದೂ ಸಹ ಪ್ರಿನ್ಸಿಪಾಲರ ಅನುಜ್ಞೆ ಪಡೆದು ಅವರ ಚೇಲ ಒಬ್ಬರು ಬಾಯಿಬಿಟ್ಟು ಹೇಳಿಬಿಟ್ಟರು

ಸಮಾರಂಭವನ್ನೇ 'ಬಾಯ್‌ಕಾಟ್' ಮಾಡಲು ಪತ್ರಿಕೋದ್ಯೋಗಿಗಳು ನಿರ್ಧರಿಸಿದರು. ಇದನ್ನೆಲ್ಲಾ ಕೇಳಿದ ಮಾಜಿ ಮಂತ್ರಿ ಕೆ. ಸಿ. ರೆಡ್ಡಿಯವರ ಪ್ರಿನ್ಸಿಪಾಲರಿಗೆ ತಂಟೆಗೆ ತೆಗದುಕೊಂಡಕಾಯಿತು. ಕೊನೆಗೆ ಪ್ರಿನ್ಸಿಪಾಲರು ಉಸಿರೆತ್ತದೆ, ಪತ್ರಿಕೋದ್ಯೋಗಿಗಳಿಗೆ ವ್ಯವಸ್ಥೆ ಮಾಡಬೇಕಾಯಿತು.

ಪತ್ರಿಕೋದ್ಯೋಗಿಗಳನ್ನು ಎತ್ತಿಕೊಂಡ ಪತ್ರಿಕೋದ್ಯೋಗಿಗಳನ್ನು ಸಬೇಕಾಯಿತು.

ವೇಲಿನಿಂದ ಇದನ್ನೆಲ್ಲಾ ನೋಡುತ್ತಿದ್ದ ರಾಜಾಜಿ ತಮ್ಮ ಭಾಷಣದ ಪ್ರಿನ್ಸಿಪಾಲರಿಗೆ ಭಾರಿ 'ಡೋಸ್' ಕೊಟ್ಟರು.

ಪತ್ರಿಕೆಯವನೆಂದರೆ ಸುಲಭದ ಮಾತಲ್ಲ. ಗಾಡಿ ಓಡಿಸುವ ಸಾಂಥಿಯಂತೆ. ಪ್ರಗತಿಗಳೂ ಅವನ ಅವನ ಅಧೀನ ಎಂದು ಹೇಳಿ ಪತ್ರಿಕೋದ್ಯೋಗಿಗಳನ್ನು ಪಟ್ಟಿಕ್ಕೇರಿಸಿ ಮೆರೆಸಿದರು. ಪ್ರಿನ್ಸಿಪಾಲರು ಮತ್ತು ಶಿಷ್ಯ ವರ್ಗ ಬೆಪ್ಪಾದರು. ನೆರೆದಿದ್ದ ವಿದ್ಯಾರ್ಥಿಗಳು ಗೊಳ್ಳೆಂದು ಪತ್ರಿಕೋದ್ಯೋಗಿಗಳ ಬೆನ್ನು ತಟ್ಟಿದರು. (ವಾ)

ನೈಜಾಮರ ರೈಲ್ವೆ ಸ್ಟೇಷನೊಂದಕ್ಕೆ ಹೋಗಬೇಕಾಗಿದ್ದ ಉಪ್ಪಿನ ವ್ಯಾಗನ್ನು ಕರ್ನೂಲ್ ಸ್ಟೇಷ

ಭಾರತ

ಕಾರ್ಯದರ್ಶಿ

15–8–48 ಕ್ಕೆ ಭಾರತಾಧಿನಿವೇಶ
ಕಾರವು ಆರಂಭವಾಡ ಒಂದು ವರ್ಷ
ಸಿದಿದೆ. ಮಹಾ ಕ್ಲಿಷ್ಟಭೂಯಿಷ್ಟ
ಶದ ವರ್ಷವು ಇದು. ಸ್ವತಂತ್ರ
ಭಾರತದ ಸಾರಥಿಗಳಾದ ಪಂ| ನೆಹ್ರೂ
ವರ್ಲಾರ್ ಪಟೇಲರು ವ್ಯಕ್ತಪಡಿಸಿದ
ಧೈರ್ಯದೀಕ್ಷೆ, ಪ್ರದರ್ಶಿಸಿದ ವಿಶಾಲ
ಹೃದಯ, ಅನುಸರಿಸಿದ ಬೃಹತ್ ಕಾರ್ಯ
ಕ್ರಮ ಇವು ಸ್ಥೂಲವಾಗಿ ಪ್ರಪಂಚವ
ನ್ನು ವಿಸ್ಮಯಗೊಳಿಸಿವೆ : ಸಾಮ್ರಾಜ್ಯ
ವಾದಿಗಳ ಹೃದಯಕ್ಕೆ ಗಾಳವಾಗಿ ಗಾ
ಯರಿಗೊಳಿಸಿವೆ.

ಮುಖ್ಯವಾಗಿ ಸಾಮ್ರಾಜ್ಯವಾದಿಗ
ಳ ಕ್ರೀಡಾರಂಗಗಳಾಗಿ ಭಾರತ
ಭೂಮಿಯಲ್ಲಿ ಪೋಷಿಸಲ್ಪಡುತ್ತಾ ಇದ್ದ
ದೇಶ ಸಂಸ್ಥಾನಗಳೆಂಬ ಸುಮಾರು
ವಜ್ರದುರ್ಗಗಳನ್ನು ಭೇದಿಸುವ
ರ್ಯದಲ್ಲಿ ಸರದಾರ್ ಪಟೇಲರು
ರಿಸಿದ ನೀತಿಯು ಪ್ರಶಂಸನೀಯ
ದೆಂದು.

ಒಂಭತ್ತು ತಿಂಗಳೊಳಗಾಗಿಯೇ
[illegible]ಯ
[illegible]
ೀಕಯುತವಾದ ಉಪ
[illegible]ಕ ಸಂಸ್ಥಾನಾಧೀಶರು
ದರು. ಆದರೆ ಒಂದೆರಡು ತಲೆ
ನಗಿರುವ ಸಂಸ್ಥಾನಗಳೂ ಅವುಗಳಲ್ಲಿ
ನ್ನೆ ಹೋಗಿರುವುದಿಲ್ಲ.

ತಲೆ ಇರುವದು ಒಂದು ಸುಲಕ್ಷ
ಣ. ಆದರೆ ಆ ತಲೆಯು ಮತಿಮಾತ್ಸ
ರ್ಯದಿಂದ ಕೂಡಿದ್ದಾದರೆ ಅತಿ ಪ್ರ
ಮಾದಿಕಾರಿಯೇ ಹೌದು.

ಜೂನಗಢ, ಕಾಶ್ಮೀರ, ಹೈದರಾಬಾ
ದ ಸಂಸ್ಥಾನಗಳ, ಈ ತಲೆತಿರುಗಿದ
ತಿಯನ್ನವಲಂಬಿಸಿ ಅನೇಕ ಕಷ್ಟಗಳ
ಗಂಟುಮಾಡಿರುತ್ತವೆ.

ಜೂನಗಢದ ಹುಚ್ಚು ತನಗೆ ತಾನೇ
ಣಹೊಂದಿತು. ಜೂನಗಢದ ನವಾ
ಬನು ತನ್ನ ಹುಚ್ಚಿಗೆ ಔಷಧಿಯನ್ನು
ಲಿಸಲು ಕರಾಚಿಗೆ ಹೋಗಿ ಜಿನ್ನಾರ
ಜ ಸನ್ನಿಧಾನದಲ್ಲಿ ಸೇರಿಕೊಂಡನು
[illegible] ಈ ಮತ
[illegible]ನಂ

ಘರ್ಷಣಗಳಿಗೆ ಅವಕಾಶವನ್ನು ಕೊಟ್ಟ
ತು. ಮುಸ್ಲಿಂ ಅಲ್ಲದ ಸಂಸ್ಥಾನಾ
ನಾಧೀಶನ ಮೇಲೆ ಮುಸ್ಲಿಂರು ಹೆಚ್ಚಾ
ಗಿರುವ ಪ್ರಜೆಗಳನ್ನು ಎಬ್ಬಿಸಲು ಜಿನ್ನಾ
ಪ್ರಯತ್ನಿಸಿದನು ; ಆದರೆ ಕಾಶ್ಮೀರದ
ಸಿಂಹ ಷೇಕ್ ಅಬ್ದುಲ್ಲಾ ನಾಯಕತ್ವ
ದಲ್ಲಿ ವಿಶಾಲ ಭಾವದಿಂದ ಕೂಡಿದ
ಪ್ರಜೆಗಳು ಮತ ಕುತ್ಸಿತ ಪ್ರಬೋಧೆ
ಗಳಿಗೆ ಕಿವಿಗೊಡಲಿಲ್ಲ ; ಈ ಕಾರಣ
ದಿಂದ 'ಇಸ್ಲಾಂಗೆ ಪ್ರಮಾದ' ಎಂಬ
ಕೂಗನ್ನು ಎಬ್ಬಿಸಿ ಬೆಟ್ಟಗುಡ್ಡಗಳಲ್ಲಿ
ಯ ಅಫ್ರಿಡಿಸ್ ಜನರನ್ನು ಉದ್ರೇಕ
ಗೊಳಿಸಿ ಕಾಶ್ಮೀರದ ನಂದನವನದ
ಮೇಲೆ ಅವರು ಧಾಳಿ ಮಾಡುವಂತೆ
ಮಾಡಿದನು.

ಷೇಕ್ ಅಬ್ದುಲ್ಲಾ ಮಹಾರಾಜರ
ಇಚ್ಛೆಯನ್ನು ಪಾಲಿಸಿ, ಭಾರತ ಸರ್ಕಾ
ರವು ಕಾಶ್ಮೀರ ರಕ್ಷಣೆಗಾಗಿ ಸಾಯುಧ
ಬಲಗಳನ್ನು ಕಳುಹಿಸುವಂತೆ ಮಾಡಿದ
ನು : ಸಂಘರ್ಷಣೆ ಮೊದಲಾಯಿತು.

[ಸಶೇಷ

SHAKTI SUDHA

A Superb Tonic

Save the Cow

ಗೋವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamara Agrahar, Mysore,

University of Mysore

Office of the University
of Mysore, Mysore,
Dated 5 th August 1948.

NOTIFICATION

The following University Examinations will commence from **MONDAY THE 18 th OCTOBER 1948.** The detailed Time-tables will be published in the Gazette in due course.

i) Intermediate in Arts.
ii) Intermediate in Science.
iii) Intermediate in Commerce.
iv) B. A.,
v) B.Sc.,
vi) B. A. Hons. Preliminary
vii) B.Sc. Hons Preliminary
viii) B. Com.
ix) Engineering
x) L M P

By Order
D. S. Gordon
Registrar
University of Mysore
Mysore

At Opera From 21–8–48

THE OUTLAW

Daily 3 Shows

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದದು ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ, ಸುವಾಸನೆಯಿಂದಲೂ ಕೂಡಿದುದಾಗಿದೆ ಏನೊಂದೂ ಅಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ½ ತೋಲಾ, 1 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು